# 4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,
# ತುಮಕೂರು-ಮಧುಗಿರಿ

**ಎಸ್.ಸಿ.ಸಂಖ್ಯೆಃ** 5037/2023 ಪ್ರಾಸಾ-26
ಚಾಸಾ-27

ದಿನಾಂಕಃ 01-07-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

| | |
|---|---|
| **ಹೆಸರು** | ಗೋಪಿನಾಥ್ |
| **ತಂದೆಯ / ಗಂಡನ ಹೆಸರು** | ಚೌಡಪ್ಪ |
| **ವಯಸ್ಸು** | 30 |
| **ಉದ್ಯೋಗ** | ಹೋಟೆಲ್ ಕೆಲಸ |
| **ವಾಸಸ್ಥಳ** | ವೈ.ಎನ್.ಹೊಸಕೋಟೆ |

**ಮುಖ್ಯ ವಿಚಾರಣೆ ಸರ್ಕಾರಿ ಅಭಿಯೋಜಕರಿಂದ ಃ-**

ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-ಈಗಾಗಲೇ 22 ಎಂದು, ಸಾಕ್ಷಿ ಸಹಿಯನ್ನು ನಿಪಿ-22(ಬಿ) ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ವೈ.ಎನ್.ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ , ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ , ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-22 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ.

ನ್ಯಾಯಾಲಯದಲ್ಲಿರುವ ಅಮಾನತ್ತು ಪಂಚನಾಮೆಯನ್ನು ನೋಡಿದೇನು ಅದರಲ್ಲಿ ನನ್ನ ಸಹಿ ಇರುತ್ತದೆ ಅದನ್ನು ಗುರುತಿಸುತ್ತೇನೆ. ಸದರಿ ಅಮಾನತ್ತು ಪಂಚನಾಮೆಯನ್ನು ನಿಪಿ-ಈಗಾಗಲೇ 23 ಎಂದು, ಸಾಕ್ಷಿ ಸಹಿಯನ್ನು ನಿಪಿ-23(ಬಿ) ಎಂದು ಗುರುತಿಸಲಾಯಿತು. ಈಗ್ಗೆ 2 ವರ್ಷಗಳ ಹಿಂದೆ ವೈ.ಎನ್.ಹೊಸಕೋಟೆ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿದ್ದೇನೆ ,

ಪೊಲೀಸರ ಕೋರಿಕೆ ಮೇರೆಗೆ ಸಹಿ ಮಾಡಿರುತ್ತೇನೆ , ನನ್ನ ಮುಂದೆ ಯಾವುದೇ ಪಂಚನಾಮೆ ಮಾಡಿರುವುದಿಲ್ಲ ಮತ್ತು ಏನನ್ನೂ ಅಮಾನತ್ತುಪಡಿಸಿಕೊಂಡಿರುವುದಿಲ್ಲ. ನಿಪಿ-23 ರಲ್ಲಿ ಬರೆದ ವಿಷಯ ಗೊತ್ತಿರುವುದಿಲ್ಲ. ನ್ಯಾಯಾಲಯದ ಮುಂದೆ ಇರುವ 2 ಪೊಟೋಗಳನ್ನು ನೋಡಿದ್ದು, ಅದರಲ್ಲಿ ತನ್ನ ಇರುವಿಕೆಯನ್ನು ಗುರುತಿಸಿರುತ್ತಾರೆ, ಸದರಿ ಪೊಟೋಗಳನ್ನು ನಿಪಿ-24 ಮತ್ತು ನಿಪಿ-25 ಎಂದು ಗುರುತಿಸಲಾಯಿತು. ನ್ಯಾಯಾಲಯದ ಮುಂದೆ ಇರುವ ಮು.ಮಾ-1, 3 ರಿಂದ 7 ಬಟ್ಟೆಗಳ ಚೀಲಗಳ ಮೇಲೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ ಸದರಿ ಚೀಲದಲ್ಲಿ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ ಮೂರು ಬಿಳಿ ಬಟ್ಟೆಯ ಪ್ಯಾಕ್ ಹಾಜರುಮಾಡಿದ್ದು ಅವುಗಳ ಮೇಲೆ ಸೀಲ್ ಸುಸ್ತಿತಿಯಲ್ಲಿರುತ್ತದೆ. ಸದರಿ ಬಿಳಿ ಬಟ್ಟೆಯ ಸೀಲ್ ಆಗಿರುವ ಮೂರು ಪ್ಯಾಕುಗಳು ಮೇಲೆ ಅಂಟಿಸಿರುವ ಚೀಟಿಗಳಲ್ಲಿ ನನ್ನ ಸಹಿ ಇರುತ್ತದೆ, ಸದರಿ ಚೀಲಗಳಲ್ಲಿ ಏನು ಇರುತ್ತದೆ ಎಂದು ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಪಿಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರಿದ್ದರಿಂದ ಅನುಮತಿಸಲಾಯಿತು)**

**<u>ಪಾಟೀಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ ಃ-</u>**

ದಿ. 16.08.2023 ರಂದು ಬೆಳಿಗ್ಗೆ 6.30 ರಿಂದ 7-30 ಗಂಟೆ ಸಮಯದಲ್ಲಿ ವೆ.ಎನ್.ಹೊಸಕೋಟೆ ಪೊಲೀಸ್ ಠಾಣೆಯ ಸಬ್ ಇನ್ಸ್ಪೆಕ್ಟರ್ ಕೊಠಡಿಯಲ್ಲಿ ನಮ್ಮನ್ನು ಕರೆಸಿ ಎಫ್.ಎಸ್.ಎಲ್. ತಜ್ಞರು ಸಂಗ್ರಹಿಸಿದ ವಸ್ತುಗಳನ್ನು ಅನ್ ಸೀಲ್ಡ್ ಕವರ್ ನಲ್ಲಿ ಕಳುಹಿಸಿದ್ದು ಸದರಿ ವಸ್ತುಗಳನ್ನು ಎಫ್.ಎಸ್.ಎಲ್. ಕಳುಹಿಸುವ ಸಲುವಾಗಿ ಚೀಲಗಳಲ್ಲಿ ಹಾಕಿ ಸೀಲ್ ಮಾಡಿ ನಿಪಿ-22 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಅದೇ ದಿನ ಸಂಜೆ 7-50 ರಿಂದ 8-30 ಗಂಟೆ ಸಮಯದಲ್ಲಿ ಮೃತಳ ಮೈಮೇಲಿನ ಬಟ್ಟೆಗಳನ್ನು ರಂಜಿತಾ ರವರು ಹಾಜರುಪಡಿಸಿದ್ದು ಅವುಗಳು ಒಂದು ರಕ್ತದ ಕಲೆ ಆಗಿರುವ ಸಿಮೆಂಟ್ ಕಲರ್ ಚೂಡಿದರ್ ಟಾಪ್ , ರಕ್ತದ ಕಲೆಯಾಗಿರುವ ನೀಲಿ ಬಣ್ಣದ

ಚೂಡಿದಾರ್ ಪ್ಯಾಂಟ್ , ಕಪ್ಪು ಬಣ್ಣದ ಬ್ರಾ ಹಾಜರುಪಡಿಸಿದ್ದು ಅವುಗಳನ್ನು ಬಿಳಿ ಬಟ್ಟೆಗಳ ಚೀಲಗಳಲ್ಲಿ ಹಾಕಿ ಹೊಲಿದು ಸೀಲ್ ಮಾಡಿ ನಿಪಿ-23 ರಂತೆ ಪಂಚನಾಮೆ ಮಾಡಿ ಅಮಾನತ್ತುಪಡಿಸಿಕೊಂಡು ನನ್ನ ಸಹಿ ತೆಗೆದುಕೊಂಡರು ಎಂದರೆ ಸರಿಯಲ್ಲ. ನನ್ನ ಸಮಕ್ಷಮ ನಿಪಿ-22 ಮತ್ತು 23 ರಂತೆ ಪಂಚನಾಮೆಗೆ ಸಹಿ ಮಾಡಿದ್ದರೂ ಕೂಡ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲುಃ-ಶ್ರೀ ಪಿ.ಎಎನ್.ಆರ್. ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ</u>**

**ಮರುವಿಚಾರಣೆ ಇಲ್ಲ.**

(ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**ಒ ತಿ ಹೇ ಸ ಇದೆ.**

**4 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,**

**ತುಮಕೂರು-ಮಧುಗಿರಿ.**